ಕರ್ನಾಟಕ ರಾಜ್ಯ ಬೀಜ ನಿಗಮ ಕೆಒಎಫ್ ಮತ್ತು ರಾಷ್ಟ್ರೀಯ ಬೀಜನಿಗಮಕ್ಕೆ ವರ್ಗಾಯಿಸಿ, ಗೊರೂರಿನಲ್ಲಿದ್ದ ಒಂದು ಕೇಂದ್ರವನ್ನು ಮುಚ್ಚಿದ ಕಾರಣ, ಕೃಷಿ ಇಲಾಖೆಯಡಿಯಲ್ಲಿ ಸದಸ್ಯ ೩೧ ಕೇಂದ್ರಗಳು ಮಾತ್ರ ಇರುತ್ತವೆ.

ಆ) ಈ ಕೇಂದ್ರಗಳಲ್ಲಿ ಭತ್ತ, ರಾಗಿ, ಜೋಳ ನೆಲಗಡಲೆ ಮತ್ತಿತರ ಬೆಳೆಗಳ ಮೂಲ ಬೀಜದ ಉತ್ಪಾದನೆಯನ್ನು ತೆಗೆದುಕೊಳ್ಳಲಾಗುತ್ತಿದೆ. ೧೯೮೯–೯೦ನೇ ಸಾಲಿನಲ್ಲಿ ಕೃಷಿ ಇಲಾಖೆ ಮತ್ತು ಜಿಲ್ಲಾ ಪರಿಷತ್ ಅಧೀನದಲ್ಲಿದ್ದ ೫೧ ಕೇಂದ್ರಗಳಲ್ಲಿ ೨೩೧೫ ಕ್ವಿಂಟಾಲ್‌ನಷ್ಟು ಮೂಲ ಬೀಜೋತ್ಪಾದನೆ ಯಾಗಿರುತ್ತದೆ: ೧೯೯೦–೯೧ನೇ ಸಾಲಿನಲ್ಲಿ ಕೃಷಿ ಇಲಾಖೆ ಮತ್ತು ಜಿಲ್ಲಾ ಪರಿಷತ್‌ಗಳಡಿಯಲ್ಲಿ ಸದ್ಯ ಇರುವ ೬೫ ಕೇಂದ್ರಗಳಲ್ಲಿ ಸುಮಾರು ೨೧೦೦ ಕ್ವಿಂಟಾಲ್ ಮೂಲ ಬೀಜೋತ್ಪಾದನೆ ಮಾಡಲು ಯೋಜಿಸಲಾಗಿದೆ. ಇದಲ್ಲದೆ, ಕರ್ನಾಟಕ ರಾಜ್ಯ ಬೀಜ ನಿಗಮಕ್ಕೆ ವರ್ಗಾಯಿಸಲಾಗಿರುವ ೬ ಕೇಂದ್ರಗಳಲ್ಲಿ ಸುಮಾರು ೯೭೬ ಕ್ವಿಂಟಾಲ್ ಮೂಲ ಬೀಜವನ್ನು ೧೯೯೦–೯೧ರಲ್ಲಿ ಉತ್ಪಾದಿಸಲು ಯೋಜಿಸಲಾಗಿದೆ.

ಇ) ರಾಜ್ಯದ ರೈತರುಗಳಿಗೆ ಬೇಕಾಗುವ ವಿವಿಧ ಬೆಳೆಗಳ ಬಿತ್ತನೆ ಬೀಜವನ್ನು ದೊರಕಿಸಿ ಕೊಡಲು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

೧) ಜಿಲ್ಲಾವಾರು ಮತ್ತು ಬೆಳೆವಾರು ಪ್ರಮಾಣಿತ : ಉತ್ತಮ ಗುಣಮಟ್ಟದ ಬೀಜಗಳ ಬೇಡಿಕೆಯನ್ನು ಬಿತ್ತನೆಗೆ ಮುಂಚಿತವಾಗಿ ನಿರ್ಧರಿಸಿ ಸರ್ಕಾರಿ ಹಾಗೂ ಖಾಸಗಿ ಬೀಜ ವಿತರಣಾ ಸಂಸ್ಥೆಗಳಿಗೆ ಕಳುಹಿಸಿ ಸಕಾಲದಲ್ಲಿ ಬಿತ್ತನೆ ಬೀಜ ದೊರಕುವಂತೆ ಮಾಡಲು ವ್ಯವಸ್ಥೆ ಮಾಡಲಾಗಿದೆ.

೨) ವಿವಿಧ ಪಟ್ಟಣಗಳಲ್ಲಿ ಬೀಜ ದಾಸ್ತಾನು, ವಿತರಣೆ ಮತ್ತು ಕೊರತೆಗಳ ಬಗ್ಗೆ ಕಾಲಕಾಲಕ್ಕೆ ಸಮೀಕ್ಷೆ ನಡೆಸಲಾಗುತ್ತಿದೆ. ಯಾವುದೇ ಭಾಗದಲ್ಲಿ ಯಾವುದೇ ಬಿತ್ತನೆ ಬೀಜದ ಕೊರತೆ ಕಂಡು ಬಂದಲ್ಲಿ ಅವುಗಳನ್ನು ಒದಗಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಸರ್ಕಾರದಿಂದ ಮಾನ್ಯತೆ ಪಡೆಯದಿರುವ ಶಾಲಾ ಕಾಲೇಜುಗಳ ಬಗ್ಗೆ

೩೨. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸರ್ಕಾರ ಮಾನ್ಯ ಮಾಡದೆ ಇರುವ ಶಾಲೆ/ಕಾಲೇಜುಗಳಲ್ಲೂ ವಿದ್ಯಾರ್ಥಿಗಳ ಪ್ರವೇಶ ನಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಬೆಂಗಳೂರು ನಗರದಲ್ಲಿ ಇಂಥ ಶಾಲೆಗಳ ಬಗ್ಗೆ ಸರ್ಕಾರದವರು ತೆಗೆದುಕೊಂಡ ಹಾಗೂ ತೆಗೆದುಕೊಳ್ಳಲಿರುವ ಕ್ರಮಗಳೇನು ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ಹೌದು

ಆ) ಪ್ರತಿ ವರ್ಷದಂತೆ ಈ ವರ್ಷವೂ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮೊದಲು ಬೆಂಗಳೂರು ನಗರದ ಉತ್ತರ ಮತ್ತು ದಕ್ಷಿಣ ಜಿಲ್ಲೆ ಉಪನಿರ್ದೇಶಕರವರ ಕಾರ್ಯಾಲಯದಿಂದ ಅನಧಿಕೃತ ಶಾಲೆಗಳ ಪಟ್ಟಿಯನ್ನು ದಿನಪತ್ರಿಕೆಯಲ್ಲಿ ಪ್ರಕಟಿಸಿ ಅಂತಹ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ಸೇರಿಸಬಾರದೆಂದು ಸಾರ್ವಜನಿಕರ (ಪೋಷಕರ) ಗಮನಕ್ಕೆ ತರಲಾಗಿದೆ. ಈ ಇಲಾಖೆಯ ವ್ಯಾಪ್ತಿಗೆ ಬರುವ ಕಾಲೇಜುಗಳಲ್ಲಿ ಮಾನ್ಯತೆ ಪಡೆಯದಿರುವ ಕಾಲೇಜುಗಳು ಇರುವುದಿಲ್ಲ.

ಬೆಂಗಳೂರು ನಗರ ಜಿಲ್ಲೆಯಲ್ಲಿ ಶಿಕ್ಷಕ ಸಿಬ್ಬಂದಿ ವರ್ಗದವರ ಕೊರತೆಯ ಬಗ್ಗೆ

೫೮. ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಪ್ರೌಢಶಾಲೆ ಹಾಗೂ ಕಿರಿಯ ಕಾಲೇಜು ಗ ಶಿಕ್ಷಕರ ಸಿಬ್ಬಂದಿ ವರ್ಗದವರ ಕೊರತೆ ಇರುವುದು ಸರ್ಕಾರದವರು ಗಮನಕ್ಕೆ ಬಂದಿದೆಯೆ ?